ಇಟ್ಟಿಗೆ ಮತ್ತು ಸ್ವಂತ ಬಂಡವಾಳ ಹೂಡಿಕೆ ಘಟಕಗಳನ್ನು ಹೊರತುಪಡಿಸಿ) ಬಿಡುಗಡೆ ಮಾಡಲಾಗಿದೆ. ದಿನಾಂಕ ೧.೧.೯೯ ರಿಂದ ೩೧.೩.೨೦೦೦ ರವರೆಗೆ ಬಾಕಿ ಇರುವ ಶೇ. ೫೦ ರಷ್ಟು ಸಹಾಯಧನವನ್ನು ಈ ಮಾಹೆಯಲ್ಲಿ ಬಿಡುಗಡೆಗೊಳಿಸಲು ಸರ್ಕಾರದ ಆದೇಶ ಹೊರಡಿಸಲಾಗಿದೆ.

ಆ) ರೂ. ೩೪೫.೬೩ ಕೋಟಿ ಹಣ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಇ) ಈ ಹಣವನ್ನು ೨೦೦೫-೦೬ ಹಾಗೂ ಮುಂದಿನ ಸಾಲುಗಳಲ್ಲಿ ಬಿಡುಗಡೆ ಮಾಡಲಾಗುವುದು.

೩೮೬೭ (೩೮೦೨) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :- ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇತ್ತೀಚಿನ ಪ್ರಗತಿ ಯಾವ ಹಂತದಲ್ಲಿದೆ;

ಆ) ಈ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೇ ಹಾಗೂ ಯಾವಾಗ ಪೂರ್ಣಗೊಳ್ಳುವುದು?

ಶ್ರೀ. ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ೧. ರಾಜ್ಯ ಸರ್ಕಾರವು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿ.ಐಎಎಲ್) ಸಂಸ್ಥೆಯೊಂದಿಗೆ ರಾಜ್ಯ ಬೆಂಬಲ ಒಪ್ಪಂದವನ್ನು ಮತ್ತು ಕೆಎಸ್ಐಐಡಿಸಿ ಮುಖಾಂತರ ಭೂ ಗುತ್ತಿಗೆ ಒಪ್ಪಂದವನ್ನು ದಿನಾಂಕ ೨೦.೦೧.೨೦೦೫ ರಂದು ಸಹಿ ಮಾಡಲಾಗಿದೆ.

೨. ಕೆಎಸ್ಐಐಡಿಸಿಯು ಗುತ್ತಿಗೆ ಪತ್ರದ ಮೂಲಕ ಭೂಮಿಯನ್ನು ದಿನಾಂಕ ೩೦-೦೪-೨೦೦೫ ರಂದು ಬಿಐಎಎಲ್‌ಗೆ ಹಸ್ತಾಂತರಿಸಿದೆ.

೩. ಸಾಲ ಕೊಡುವವರೊಂದಿಗೆ ಹಣಕಾಸು ಒಪ್ಪಂದದ ಜೊತೆಗೆ ಎಲ್ಲಾ ಯೋಜನಾ ಒಪ್ಪಂದಗಳು ಪೂರ್ಣಗೊಂಡಿದ್ದು ೨೩-೦೬-೨೦೦೫ ರಂದು ಹಣಕಾಸು ವ್ಯವಸ್ಥೆಯನ್ನು ಸಾಧಿಸಲಾಗಿದೆ.

ಆ) ವಿಮಾನ ನಿಲ್ದಾಣಕ್ಕಾಗಿ ಬಿ.ಐ.ಎ.ಎಲ್ ಸಂಸ್ಥೆಯು ನಿವೇಶನದಲ್ಲಿ ಈಗಾಗಲೇ ಪೂರ್ವಸಿದ್ದತೆಯ ಕೆಲಸಗಳನ್ನು ಪ್ರಾರಂಭಿಸಲಾಗಿದ್ದು. ಜುಲೈ ಮೊದಲ ವಾರದಲ್ಲಿ ಪರಿಪೂರ್ಣ ನಿರ್ಮಾಣ ಚಟುವಟಿಕೆಗಳು ಪ್ರಾರಂಭವಾಗಲಿದೆ.

೩೮೬೮ (೩೮೦೩) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು;

ಆ) ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಮಹಾರಾಷ್ಟ್ರ ಯಾವ ರೀತಿ ಕೇಂದ್ರದಿಂದ ೫೦೦ ಕೋಟಿ ರೂ ಪ್ಯಾಕೇಜ್ ಜಾರಿಗೆ ತಂದಿದೆಯೊ. ಅದೇ ರೀತಿ ರಾಜ್ಯದಲ್ಲೂ ಕೇಂದ್ರದಿಂದ ಪ್ಯಾಕೇಜ್ ತರಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಅಮರೇಗೌಡ ಎಲ್. ಪಾಟೀಲ್ ಬೈಯ್ಯಾಪುರ (ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು ೪೬ ಸಕ್ಕರೆ ಕಾರ್ಖಾನೆಗಳಿವೆ, ನಷ್ಟದಲ್ಲಿರುವ ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಲಯ	ಒಟ್ಟು ಕಾರ್ಖಾನೆ	ನಷ್ಟದಲ್ಲಿರುವ ಕಾರ್ಖಾನೆ
೦೧	ಸಹಕಾರಿ	೨೧	೧೪
೦೨	ಖಾಸಗಿ	೨೨	೧೫
೦೩	ಸರ್ಕಾರಿ	೦೨	೦೨
೦೪	ಜಂಟಿ	೦೧	೦೧

ಆ) ೨೦೦೨-೦೩ ನೇ ಸಾಲಿನಲ್ಲಿ ಕಬ್ಬು ಬೆಲೆ ಬಾಕಿ ತೀರುವಳಿ ಮಾಡಲು ಮುಕ್ತ ಮಾರುಕಟ್ಟೆಯಲ್ಲಿ ಬಾಂಡ್ ಮೂಲಕ ಹಣ ಸಂಗ್ರಹಿಸುವ ರೂ.೨೯೫.೯೪ ಕೋಟಿಗಳ ಮೊತ್ತದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.